**ದಿನಾಂಕಃ 28.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಾನು ದಿಃ03.11.2006 ರಂದು ಬಸವರಾಜಮ್ಮ ರವರಿಂದ ದಾವಾ ಆಸ್ತಿಯ ಸಂಬಂಧ ಕ್ರಯ ಮಾಡಿಸಿಕೊಂಡಿರುವುದಾಗಿ ಹೇಳಿದ್ದು ಇದಕ್ಕೆ ಪೂರ್ವದಲ್ಲಿ ನಾನು ಎಲ್ಲಾ ದಾಖಲಾತಿಗಳು ಅಂದರೆ ನೊಂದಾಯಿತ ಪತ್ರ, ಹಕ್ಕು ಪತ್ರ, ಸಾವಿತ್ರಮ್ಮರವರು ಅಂದರೆ ಪ್ರತಿವಾದಿ ಷೆಡ್ಯೂಲ್ ನಲ್ಲಿ ತಪ್ಪಾಗಿ ಪಾಯ ಹಾಕಿಕೊಂಡಿರುವುದಾಗಿ ತಪ್ಪಾಗಿರುವುದಾಗಿ ಪಂಚಾಯತಿಯ ಮುಂದೆ ನೀಡಿರುವ ಪತ್ರವನ್ನು ಹಾಗೂ 4 ಸಾವಿರ ರೂಗಳನ್ನು ಕಟ್ಟಿರುವ ದಾಖಲಾತಿಯನ್ನು ನೋಡಿರುತ್ತೇನೆ. ನಾನು ಸದರಿ ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆಯುವ ಮುಂಚೆ ಕಾನೂನು ಸಲಹೆಯನ್ನು ಪಡೆದಿರುವುದಿಲ್ಲ. ಈ ಸಂಬಂಧ ನಾನು ಪತ್ರಿಕಾ ಪ್ರಕಟಣೆ ಅಥವಾ ಯಾರಿಗಾದರೂ ನೋಟೀಸನ್ನು ಕೊಡುವ ಪ್ರಕ್ರಿಯೆಯನ್ನು ಮಾಡಿರುವುದಿಲ್ಲ. ಹಕ್ಕುಪತ್ರದ ಸಂಬಂಧ ನಾನು ಖುದ್ದಾಗಿ ಎಲ್ಲಾ ವಿಷಯವನ್ನು ಓದಿ ತಿಳಿದುಕೊಂಡಿರುತ್ತೇನೆ.

2. ನಾನು ನನ್ನ ವಾದಪತ್ರದಲ್ಲಿ ದಿಃ04.03.1987 ರಂದು ಬಸವರಾಜಮ್ಮರವರಿಗೆ ಹಕ್ಕುಪತ್ರ ನೀಡಲಾಗಿರುತ್ತದೆಂದು ಬರೆಸಿರುತ್ತೇನೆಂದರೆ ಸರಿ. ನಿಪಿ-9 ನ್ನು ನಾನು ಸಂಪೂರ್ಣವಾಗಿ ಓದಿ ತಿಳಿದುಕೊಂಡಿರುತ್ತೇನೆ. ನಿಪಿ-9 ರ 2ನೇ ಪುಟದಲ್ಲಿ ಹಕ್ಕುಪತ್ರ ನೀಡುವ ಷರತ್ತಿನ ಬಗ್ಗೆ ನನಗೆ ಗೊತ್ತು ಎಂದರೆ ಸರಿ. ನಾನು ನನ್ನ ವಾದಪತ್ರದ ಕಂಡಿಕೆ 4 ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಕಂಡಿಕೆ 3 ರಲ್ಲಿ ಬಸವರಾಜಮ್ಮರವರು ದಿಃ10.12.2012 ರಂದು ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂಬುದಾಗಿ ಬರೆಸಿರುತ್ತೇನೆಂದರೆ ಸರಿ. ಅದರಂತೆ ಸದರಿ ಕ್ರಯಪತ್ರದ ನೊಂದಾಯಿತ ಸಂಖ್ಯೆ ಹಾಗೂ ಪುಸ್ತಕದ ಸಂಖ್ಯೆಯನ್ನು ಸಹ ನಾನೇ ಹೇಳಿ ಬರೆಸಿರುತ್ತೇನೆ. ಬಸವರಾಜಮ್ಮರವರು ಈ ಸಂಬಂಧ ಕ್ರಯಕ್ಕೆ ಪಡೆಯಲು ಯಾವುದೇ ಸಕ್ಷಮ ಪ್ರಾಧಿಕಾರದಿಂದ ಪರವಾನಿಗೆಯನ್ನು ಪಡೆದಿರುವುದಿಲ್ಲ.

3. ನಿಪಿ-9 ರ ಮೊದಲನೇ ಷರತ್ತಿನಂತೆ ಹಕ್ಕುಪತ್ರ ನೀಡಿದ 25 ವರ್ಷಗಳವರೆಗೂ ಯಾವುದೇ ಮಾರಾಟ, ಪರಬಾವೆ, ಇತ್ಯಾದಿ ವ್ಯವಹಾರ ಸ್ವತ್ತಿನ ಸಂಬಂಧ ಮಾಡಬಾರದು ಎಂಬುದಾಗಿ ಷರತ್ತನ್ನು ವಿಧಿಸಿ ಚಂದ್ರಮ್ಮರವರಿಗೆ ಹಕ್ಕುಪತ್ರ ನೀಡಲಾಗಿದೆ ಎಂದರೆ ಸರಿ. ನಿಪಿ-9 ರ 2ನೇ ಷರತ್ತಿನ ಪ್ರಕಾರ 1ನೇ ಷರತ್ತನ್ನು ಉಲ್ಲಂಘನೆ ಮಾಡಿ ಸದರಿ ನಿವೇಶನವನ್ನು ಯಾರಾದರೂ ಖರೀದಿಸಿದರೆ ಮಾರಾಟವು ನಿಯಮಬಾಹಿರ ವಾಗಿರುವುದು ಎಂಬುದಾಗಿ ಬರೆಯಲಾಗಿದೆ ಎಂದರೆ ಸರಿ. ದಿಃ04.03.1987 ರಿಂದ 25 ವರ್ಷ ಅವಧಿ ಮುಗಿಯುವವರೆಗೂ ಚಂದ್ರಮ್ಮರವರಿಗೆ ನಿವೇಶನವನ್ನು ಮಾರಾಟ ಮಾಡುವ ಅಧಿಕಾರ ಇರಲಿಲ್ಲ ಎಂದರೆ ಸರಿ. ಸದರಿ ನಿಪಿ-9 ರ ನಿಭಂದನೆಯ ಪ್ರಕಾರ ಚಂದ್ರಮ್ಮರವರಿಗೆ ಕ್ರಯ ಮಾಡಿಕೊಡುವ ಹಕ್ಕು ಇರಲಿಲ್ಲ ಆದ್ದರಿಂದ ಊರ್ಜಿತವಲ್ಲದ ಕ್ರಯದ ಮೇರೆಗೆ ನಾನು ನಂತರದಲ್ಲಿ ಬಸವರಾಜಮ್ಮ ರವರಿಂದ ಕ್ರಯ ಮಾಡಿಕೊಂಡಿರುವುದು ಊರ್ಜಿತವಲ್ಲ ಎಂದರೆ ಸಾಕ್ಷಿಯು ನನಗೆ ಈ ಬಗ್ಗೆ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರು ಪಡಿಸಿರುವ ಕ್ರಯಪತ್ರವು ಸೃಷ್ಟಿಸಿರುವ ಕ್ರಯಪತ್ರ ಎಂದರೆ ಸರಿಯಲ್ಲ.

4. ಪ್ರತಿವಾದಿಯು ಸೈಟ್ ನಂ.31 ರಲ್ಲಿ ಪಾಯ ಹಾಕಿರುವುದಾಗಿ ನಾನು ಹೇಳಿದ್ದು ಅದು ಯಾವಾಗ ಎಂದು ನನಗೆ ಹೇಳಲಾಗುವುದಿಲ್ಲ. ನಾನು ಕ್ರಯಕ್ಕೆ ಕೊಳ್ಳುವ ಪೂರ್ವದಲ್ಲೇ ಹಾಕಿದ್ದರಾ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ಪ್ರತಿವಾದಿಯು ಈ ಸಂಬಂಧ ಪಂಚಾಯತಿಗೆ ಪತ್ರ ಕೊಟ್ಟು 4 ಸಾವಿರ ರೂಗಳನ್ನು ಕಟ್ಟಿರುವುದಾಗಿ ತೋರಿಸಲು ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಹಾಜರು ಪಡಿಸಿರುತ್ತೇನೆಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ನ್ಯಾಯಾಲಯದ ಮುಂದಿರುವ ತಾನು ಹಾಜರು ಪಡಿಸಿರುವ ದಾಖಲಾತಿಗಳನ್ನು ಪ್ರತಿವಾದಿ ಪರ ವಕೀಲರು ತೋರಿಸಿದ ನಂತರ ನಾನು ಸದರಿ ದಾಖಲಾತಿಗಳನ್ನು ವಕೀಲರಿಗೆ ನೀಡಿರುತ್ತೇನೆಂದು ನುಡಿಯುತ್ತಾರೆ. ಪ್ರತಿವಾದಿಯು ಈ ರೀತಿ ಪಾಯ ಹಾಕಿರುವ ಸಂಬಂಧ ನಂತರದಲ್ಲಿ ಅವರಿಂದ ಸ್ವಾಧೀನವನ್ನು ನ್ಯಾಯಾಲಯದ ಮುಖೇನ ಪಡೆದಿಲ್ಲ ಎಂದರೆ ಸಾಕ್ಷಿಯು ನನಗೆ ಮಾರಾಟ ಮಾಡಿದವರು ಪಡೆದಿರುತ್ತಾರೆಂದು ನುಡಿಯುತ್ತಾರೆ. ಬಸವರಾಜಮ್ಮರವರು ನ್ಯಾಯಾಲಯಕ್ಕೆ ಯಾವುದೇ

**ದಾವೆ ಸಲ್ಲಿಸಿ ಪ್ರತಿವಾದಿಯಿಂದ ಯಾವುದೇ ಸ್ವಾಧೀನ ಅಥವಾ ಅನುಭವವನ್ನು ಪಡೆದುಕೊಂಡಿರಲಿಲ್ಲ ಎಂದರೆ ಸರಿ.**

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ವಕೀಲರು ಸಮಯಾವಕಾಶ ಕೋರಿದ್ದು ಆಲಿಸಿ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**